

ಎಡದಿಂದ ಬಲಕ್ಕೆ:

1. ಅವರ ಪರಸ್ಪರ ಸಂಬಂಧದಲ್ಲಿ 'ಕೆಟ್ಟ ಧ್ವನಿ' ಕೇಳಿಸಿತೇ? (4)
3. ದುಷ್ಟ ಪ್ರಭಾವದಿಂದ ದೂರಾಗುವ ವಿಧಾನ ಕುರಿತು ದೀರ್ಘಬರಹ (3)
4. ಹೊಸದನ್ನೇ ಸದಾ ಸ್ವೀಕರಿಸಲೂ ತಾಳ್ಮೆ ಬೇಕು (3)
6. ಮಹತ್ವದ್ದನ್ನೆಲ್ಲ ಮರೆತು ನಿಂತ ಬುದ್ಧಿ ಇಲ್ಲದವ (4)
7. ಅರಿಸುವ ಕೆಲಸದಲ್ಲೂ ಏಕಿಂಥ ಆತುರ? (4)
8. ಹೊಸದಾದ ಕಾರಲ್ಲಿ ಬಂದ ಹಣವಂತ ಗೊತ್ತೇ? (4)
10. ತಾರು ಕತ್ತರಿಸಲು ಕೈ ಹಚ್ಚಿದ್ದಕ್ಕೆ ಆಕ್ಷೇಪ ಬಂದಿದೆ (4)
12. 'ಆನೆ ಕಿವಿ'-ಅದಾವ ಚರ್ಮ ರೋಗ? (4)
14. ಅಬ್ಬಾ! ಈ ಭೂಪತಿಯೇ ಲಕ್ಷ್ಮಿಯ ಗಂಡ (4)
16. ವಜೀರ ತಂದಿದ್ದು ಇಲ್ಲಿ ಸೇರುವಂಥದ್ದಲ್ಲ (3)
17. ಜವಾಹಿರಿ ಅಂಗಡಿಯಲ್ಲಿ 'ನೀರಲ್ಲಿ ಜನಿಸಿದ ಕುಸುಮ' ನೋಡಿ (3)
18. ಕಹಿ ಸೇವಿಸಿ ಭಾರೀ ಮುಜುಗರ, ಕಳವಳ (4)

ಮೇಲಿಂದ ಕೆಳಕ್ಕೆ:

1. ಅದಮ್ಯ ಬಯಕೆಗಳ ಕೀಳು ಮನುಷ್ಯ (3)
2. ಶೂರನೇ ಆದರೂ ನಾಲಿಗೆ ಬೇಕಲ್ಲ (3)
3. ಪರಿಹರಿಸಿದವನ ಬಗೆಗೇ ಹಾಸ್ಯವೇ? (4)
5. ವಾನರರ ಸಂರಕ್ಷಣೆಗೆ ಸಹಾಯ ಬೇಕು (3)
7. ಆಸಕ್ತಿ ಕಳೆಯಿತೆಂದರೆ ಕಣ್ಮರೆಯಾಯಿತೆಂದೇ ಅರ್ಥ (4)
9. ವಿರಕ್ತನಿಗೆ ಇಷ್ಟವಾದದ್ದು ಇದೇ ಕೆಂಬಣ್ಣ (4)
11. ವಿರಾಜಿಸಿದವರಿಗೆ ತಕ್ಕದ್ದು ಈ ತಾವರೆ (3)
13. ಆ ಅಜ್ಞನಿಗೂ ಈ ಅಜ್ಞನಿಗೂ ಅಂತರ ಆಡು-ಆನೆ (4)
14. ಆತಂಕ ಸಹಜ ಬಿಡಿ- ಆತ ಯಮನೇ ಹೌದು (3)
15. ವಸತಿಗೆ ತಕ್ಕಂತಿದೆ ಸುಂದರ ನೆಲಹಾಸು (3)

## ಪದಬಂಧ: 16-9-2010ರ ಉತ್ತರಗಳು

ಎಡದಿಂದ ಬಲಕ್ಕೆ:

1. ಅಪಾಯ; 3. ಕೊರಳು; 4. ವಸನ; 6. ಪಾರಂಗತ; 7. ಕನಕಾಂಗಿ; 9. ನೆಲವಾಸ; 11. ಅನಾದರ; 15. ವಲ್ಲಭ; 16. ಕಟುಕ; 17. ವಕೀಲ.

ಮೇಲಿಂದ ಕೆಳಕ್ಕೆ:

1. ಅಳುಕು, 2. ಯವನ; 3. ಕೊಳಗ; 5. ನಳಿನ; 6. ಪಾಲನೆ; 8. ಗಿಟಾರ; 10. ವಾಸ್ತವ; 12. ನಾವಿಕ; 13. ಸಂಭವ; 14. ಸಕಲ.

# ಖಗ ವಿಶೇಷ

## 'ಗೂಬೆ'-ಎಷ್ಟು ಬಗೆ?

ಗೂಬೆ-ಅದು ಅಸಾಮಾನ್ಯ ಸಾಮರ್ಥ್ಯಗಳ ಒಂದು ಅತಿ ವಿಶಿಷ್ಟ ಹಕ್ಕಿ. ಈ ಹಕ್ಕಿಯ ಹೆಸರಂತೂ ಅತ್ಯಂತ ಪರಿಚಿತ ಕೂಡ. ಆದರೆ ವಿಪರ್ಯಾಸ ಏನೆಂದರೆ ಈ ಹೆಸರು ಹಕ್ಕಿಯ ಹೆಸರಾಗಿರುವುದಕ್ಕಿಂತ ಕೆಟ್ಟ ಬೈಗಳಾಗಿಯೇ ಹೆಚ್ಚು ಬಳಕೆಯಲ್ಲಿದೆ. ಅಮಂಗಳ, ಅಪಶಕುನ, ಅವಲಕ್ಷಣದ ಪ್ರತಿಮೆಯಾಗಿಯೇ ಹೆಚ್ಚು ಪ್ರಚಾರದಲ್ಲಿದೆ. ವಾಸ್ತವವಾಗಿ ಅದೆಲ್ಲ ಕೇವಲ ಅಜ್ಞಾನ ಜನ್ಯ ಬಳಕೆ; ಬರೀ ಮೂಢನಂಬಿಕೆ.

ಪಕ್ಷಿ ಸಾಮ್ರಾಜ್ಯದಲ್ಲಿ ಗೂಬೆಗಳದೇ ಒಂದು ವಿಶಿಷ್ಟ ವರ್ಗ. 'ಸ್ಟ್ರೈಗಿಫಾರ್ಮಿಸ್' ಎಂಬ ಈ ಖಗವರ್ಗವನ್ನು ಎರಡು ಕುಟುಂಬಗಳನ್ನಾಗಿ ವಿಂಗಡಿಸಲಾಗಿದೆ. 'ಟೈಟಾನಿಡೇ' ಎಂಬ ಮೊದಲ ಕುಟುಂಬದಲ್ಲಿ ಹತ್ತು ಪ್ರಭೇದಗಳಿವೆ. 'ಸ್ಟ್ರಿಗಿಡೇ' ಎಂಬ ಎರಡನೆಯ ಕುಟುಂದಲ್ಲಿ ಒಂದು ನೂರಾ ಇಪ್ಪತ್ನಾಲ್ಕು ಪ್ರಭೇದಗಳಿವೆ. ಹೀಗೆ ಒಟ್ಟು ಒಂದು ನೂರಾ ಮೂವತ್ನಾಲ್ಕು ಪ್ರಭೇದಗಳಿರುವ ಗೂಬೆ ವರ್ಗದಲ್ಲಿನ ಹೆಸರುಗಳೂ ಅಷ್ಟೇ ವೈವಿಧ್ಯಮಯ: 'ಪುಟ್ಟ ಗೂಬೆ, ಪಟ್ಟೆ ಗೂಬೆ, ಚುಕ್ಕಿ ಗೂಬೆ, ಕಂದು ಗೂಬೆ, ಕೊಂಬು ಗೂಬೆ, ಪಿಗ್ಮೀ ಗೂಬೆ, ಹದ್ದು ಗೂಬೆ, ಗಿಡುಗ ಗೂಬೆ, ಗಿಡ್ಡ ಕಿವಿಯ ಗೂಬೆ, ಉದ್ದ ಕಿವಿಯ ಗೂಬೆ, ಎಲ್ಫ್ ಗೂಬೆ, ಸ್ಕ್ರೀಚ್ ಗೂಬೆ, ಮಾರ್ಶ್ ಗೂಬೆ, ಬಿಲತೋಡುವ ಗೂಬೆ, ಹಿಮ ಗೂಬೆ... ಹೀಗೆಲ್ಲ' ನಮ್ಮ ದೇಶದಲ್ಲಿರುವ ಗೂಬೆ ಪ್ರಭೇದಗಳ ಸಂಖ್ಯೆ ಐವತ್ತು.

ದೇಹಗಾತ್ರದಲ್ಲೂ ಗೂಬೆಗಳದು ತುಂಬ ವೈವಿಧ್ಯ. ಹತ್ತೇ ಸೆಂಟಿಮೀಟರ್ ಉದ್ದದ, ಗುಬ್ಬಚ್ಚಿಯಷ್ಟೇ ಗಾತ್ರದಿಂದ ಎಪ್ಪತ್ತು ಸೆಂಟಿ ಮೀಟರ್ ಉದ್ದದ ಹದ್ದು-ಗಿಡುಗಗಳ ಗಾತ್ರದವರೆಗೆ ಅವುಗಳದು ಭಾರೀ ಗಾತ್ರಾಂತರ.

ಅದೆಲ್ಲ ಏನೇ ಇದ್ದರೂ ಎಲ್ಲ ಗೂಬೆಗಳದೂ ಸರಿಸುಮಾರು ಸಮರೂಪದ ದೇಹ ಲಕ್ಷಣ ಮತ್ತು ಜೀವನ ವಿಧಾನ: 'ದೊಡ್ಡ ತಲೆ, ಚಿಕ್ಕ ಮುಖ, ಪುಟ್ಟ



ಕೊಂಕು ಕೊಕ್ಕು, ವಿಶಾಲ ದುಂಡು ಕಣ್ಣುಗಳು, ಮೃದು ಗರಿಗಳು, ಇರುಳಿನಲ್ಲೂ ಶ್ರೇಷ್ಠ ದೃಷ್ಟಿ, ನಿಶಾಚರ ಬದುಕಿನ ಕ್ರಮ, ಬೇಟೆಯಾಡಿ ತಿನ್ನುವ ಆಹಾರ ಅಭ್ಯಾಸ.' ಹಗಲಲ್ಲಿ ಗೂಬೆಗೆ ದೃಷ್ಟಿ ಇಲ್ಲ ಎಂಬುದು ಗೂಬೆ ಬಗೆಗಿನ ಒಂದು ಮಿಥ್ಯೆ; ತೀರ ತಪ್ಪು ಕಲ್ಪನೆ.

ಸಕಲ ಗೂಬೆ ಪ್ರಭೇದಗಳೂ ಶ್ರೇಷ್ಠ ಬೇಟೆಗಾರರಾಗಿವೆ; ತಾವೇ ಆಗ ತಾನೇ ಹಿಡಿದ ಬಲಿಯನ್ನಷ್ಟೇ ಅವು ಸೇವಿಸುತ್ತವೆ. ಏಕ ಪತಿ ಪತ್ನೀವ್ರತಸ್ಥರಾಗಿರುವುದೂ ಈ ಹಕ್ಕಿಗಳ ಇನ್ನೊಂದು ವಿಶೇಷ.

■ ಎನ್. ವಾಸುದೇವ್